ಬಿ. ಚಂದ್ರೇಗೌಡ, ಬೆಂಗಳೂರು

ಮಾತಿಗಿಂತ ಮೌನಕ್ಕೆ ಹೆಚ್ಚು ಬೆಲೆ ಸಿಗುವುದು ಯಾವಾಗ?



ಪಬ್ಲಿಕ್ ಲೈಬ್ರರಿಯಲ್ಲಿ ಓದಲು ಕುಳಿತಾಗ.

ಕೆ.ಎಂ. ವಿಭೂತಿ, ಹರಿಹರ

ಗುರಿ ಇಲ್ಲದ ಗುರುವಿನ ಶಿಕ್ಷಣ ಯಾವ ಪುರುಷಾರ್ಥಕ್ಕೆ?

ಅದೇ ಗುರು ನಡೆಸುವ ಟ್ಯುಟೋರಿಯಲ್‌ಗೆ ವಿದ್ಯಾರ್ಥಿಗಳನ್ನು ಸೆಳೆವ ಸ್ವಾರ್ಥಕ್ಕೆ.

ಎಂ.ಎ. ಕುಮಾರ್, ಬೆಂಗಳೂರು

ಚಿನ್ನದ ಮೇಲಿನ ವ್ಯಾಮೋಹ ಹೆಣ್ಣಿಗೆ ಬಂದಿದ್ದಾದರೂ ಹೇಗೆ?

ಮಸಣದವನ ಸತಿಯೇ ಸ್ವರ್ಣಗೌರಿ ಆಗಿರುವಾಗ ನಾಡಿನ ನಮಗೆಷ್ಟಿರಬೇಕು ಎಂಬ ಯೋಚನೆ ಹುಟ್ಟಿದಾಗ!

ಆದಿನಾರಾಯಣಮುನಿ, ಕೊಳ್ಳೇಗಾಲ

ಪ್ರತಿಬಿಂಬದಿಂದ ಮನುಷ್ಯನು ಪಾಠ ಕಲಿಯುವುದು ಇದೆಯೆ?



ಹೂಂ. ಡ್ರೆಸ್ಸು, ಮೇಕಪ್ಪು, ಲುಕ್ಸು ಸೂಕ್ತವಾಗಲು ಪ್ರಚೋದಿಸುವುದೇ ಪ್ರತಿಬಿಂಬ.

ಕೆ.ವಿ. ಗೋವಿಂದಾಚಾರಿ, ಮೈಸೂರು

ಒಳ್ಳೆಯ ವೈದ್ಯನು ಹರಿ, ನಾರಾಯಣ. ಒಳ್ಳೆಯ ದಾದಿ?

ಮಾತ್ರಾ ಸ್ವರೂಪಿಣಿ.

ಪಿ.ಜೆ. ರಾಘವೇಂದ್ರ, ಮೈಸೂರು

ಪಿತ್ರಾರ್ಜಿತ ಅಧಿಕಾರಿಗಳು, ಪಿತ್ರಾರ್ಜಿತ ರಾಜಕಾರಣಿಗಳು ಸಮಾಜಕ್ಕೆ ಮಾರಕವೋ, ಪೂರಕವೋ?

ಪಿತೃಪಕ್ಷದವರಾದ್ದರಿಂದ ಸಮಾಜಕ್ಕೆ ತರ್ಪಣ, ಶ್ರಾದ್ಧಗಳಷ್ಟೇ ಗಟ್ಟಿ.

ಮಲ್ಲಿಕಾರ್ಜುನ, ಸುರಧೇನುಪುರ

ಪ್ರಾಣಿಗಳ ಮೇಲೆ ದಯೆ ಇರಲಿ ಎಂದು ಬಸ್‌ಗಳ ಮೇಲೆ ಹಾಕಿರುವ ಮರ್ಮವೇನು?

ಪ್ರಾಣಿಗಳು ಬಸ್‌ಗೆ ಅಡ್ಡ ಬರದಂತೆ ನೋಡಿಕೊಳ್ಳಿ ಎಂಬ ವಾರ್ನಿಂಗ್ ಅದು.

ಕೆ.ಸಿ. ಸತ್ಯನಾರಾಯಣ, ದೊಡ್ಡಬಳ್ಳಾಪುರ

ಒಂದು ಯಶಸ್ವಿ ಸರ್ಕಾರ ಹೇಗಿರಬೇಕು?

ಪ್ರಜೆಗಳೆಲ್ಲರಿಗೂ ಉದ್ಯೋಗ ಇರುವಂತೆ, ಉದ್ವೇಗ ಇರದಂತೆ.

ರಾಜೀವ್ ಎನ್. ಮಾಗಲ್, ಸಕಲೇಶಪುರ

ಈ ಅಂಕಣದ ಪ್ರಶ್ನೆಗಳಿಗೆ ಉತ್ತರಿಸುವ ಮುನ್ನ ಹೈ ಕಮಾಂಡ್ ಅನುಮತಿ ಪಡೆಯುವಿರಾ?

ನಿಶ್ಚಿತವಾಗಿ. ಮೆದುಳು ಹೈ ಕಮಾಂಡ್; ಹಸ್ತ ಕಾರ್ಯಕರ್ತ.

ಕೆ.ಎಂ. ಕೊಟ್ರಸ್ವಾಮಿ, ಸಂಡೂರು

ಬೆಕ್ಕಿಗೆ, ಗೂಬೆಗೆ ಏಕೆ ಅಪಶಕುನ ಎಂಬ ಪಟ್ಟ ಕಟ್ಟಿದ್ದಾರೆ?

ಕ್ರಮವಾಗಿ ಅತ್ತೆಗೆ ಸೊಸೆಯೂ, ಸೊಸೆಗೆ ಅತ್ತೆಯೂ ಹೀಗೆ ಕಾಣುವುದರಿಂದ ಎಂದಳೊಬ್ಬ ಮಹಿಳೆ.

ಬೂಕನಕೆರೆ ವಿಜೇಂದ್ರ, ಮೈಸೂರು

ಯುವಜನಾಂಗದ ಆಕರ್ಷಣೆಗೆ ಭಾರತದಲ್ಲಿ ಇಲ್ಲದ್ದು ಅಮೆರಿಕದಲ್ಲಿ ಏನಿದೆ?

ಡಾಲರ್, ಶುಚಿತ್ವ, ವೃತ್ತಿಪರತೆ, ಸೂಪರ್ ಮನೋರಂಜನೆಗಾಗಿ ಟ್ರಂಪ್.

ಬಿ.ವಿ. ಸುರೇಶ್, ಬೆಂಗಳೂರು

ನಮ್ಮ ಏರಿಯಾದಲ್ಲಿ ಗಣೇಶನನ್ನು ಮುಳುಗಿಸುವಷ್ಟು ದೊಡ್ಡ ಗುಂಡಿಗಳಿದ್ದರೂ ಯಾರೂ ಗಮನಿಸರಲ್ಲ?

ಗಮನಿಸಿದರಂತೆ. 'ರಾಜ್ಯೋತ್ಸವಕ್ಕೆ ಬೊಂಬು ನೆಡಲು ಅನುಕೂಲ' ಎಂದು ಹಾಗೆಯೇ ಬಿಟ್ಟರಂತೆ.

ಮುರಲೀಧರ ಕುಲಕರ್ಣಿ, ಬೀದರ್

ಇರುವ ಒಂದೇ ಜಗತ್ತಿಗೆ ನೂರಾರು ಜಗದ್ಗುರುಗಳು ಏಕೆ?

ಅನುಭವವೊಂದೇ ಜಗದ್ಗುರು. ಮಿಕ್ಕಂತೆ ಬಹುತೇಕರು ಜಗ್ಗದ ಗುರುಗಳಷ್ಟೆ.

## ಬಹುಮಾನಿತ ಪ್ರಶ್ನೆ

ವಿ. ಹೇಮಂತಕುಮಾರ್, ಬೆಂಗಳೂರು

ಕೇಕ್ ಕತ್ತರಿಸದೆ ಹುಟ್ಟುಹಬ್ಬದ ಆಚರಣೆಯನ್ನು ಮಾಡಲಾಗುವುದಿಲ್ಲವೆ?

ಕ್ರೀಮು, ಸ್ಕ್ರೀಮು ಇಲ್ಲದ ಬರ್ತ್‌ಡೇ ಬರಡು ಎಂದರು ಪೇಸ್ಟ್ರೀ ಮೆತ್ತಣ್ಣನವರ್.

ಸಿ.ಕೆ. ಗಣಪ್ಪನವರ, ಮುಂಡರಗಿ

ರಾಜಕಾರಣ ಧರ್ಮಕಾರಣವಾಗುತ್ತಿದೆಯೆ?

ಧರ್ಮ–ಧರ್ಮಗಳ ನಡುವಿನ ರಣಕ್ಕೆ ಕಾರಣವಾಗುತ್ತಿದೆ.

ವಿ.ಎಸ್.ಎಸ್. ಗುರುಶಿವಮೂರ್ತಿ

ಹಾಸಿಗೆ ಇದ್ದಷ್ಟು ಕಾಲು ಚಾಚು ಎನ್ನುತ್ತಾರೆ. ಹಾಸಿಗೆ ಇಲ್ಲದಿದ್ದರೆ?

ಹಾಸಿಗೆಗಾಗಿ ಅವರಿವರ ಮುಂದೆ ಕೈ ಚಾಚು.

ಪಿ. ಜಯವಂತ ಪೈ, ಕುಂದಾಪುರ

ಗಾನ ಗೋಷ್ಠಿಗೂ, ಪಾನ ಗೋಷ್ಠಿಗೂ ವ್ಯತ್ಯಾಸವೇನು?



ಅಲ್ಲಿ ಪಕ್ಕವಾದ್ಯ ಭೂಷಣ; ಇಲ್ಲಿ ಪಕ್ಕ–ಖಾದ್ಯ ಭೂಷಣ.

ಮಹಾವೀರ ಕಾಸರ, ಶಿವಮೊಗ್ಗ

ಹಳೆಯ ಸೇತುವೆಗಳು ಹೊಸ ಸೇತುವೆಗಳಿಗಿಂತ ಸದೃಢವಾಗಿರಲು ಕಾರಣವೇನು?

ಆಗ ಲಂಚದ ಪ್ರಮಾಣ ಶೇ. 40 ಇರಲಿಲ್ಲ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ

ಮನೆಯಲ್ಲಿ ಬಿಸಿಬಿಸಿ ಅಡುಗೆ ತಯಾರಿದ್ದರೂ ಸ್ವಿಗ್ಗಿ, ಝೊಮಾಟೊಗೆ ಆರ್ಡರ್ ಮಾಡುವವರಿಗೆ ನಿಮ್ಮ ಕಿವಿಮಾತು?

ಅಡುಗೆಗೆ ಮುಂಚೆಯೇ ಆರ್ಡರಿಸಿ; ಶ್ರಮ, ದಿನಸಿ, ಇಂಧನ ಉಳಿಸಿ.

ಬಿ. ಬಸವರಾಜ್, ಹರಿಹರ

ಮನೆಯ 'ಮದರ್'ಗೂ, ಟೀವಿಯ 'ಮದರ್ ಬೋರ್ಡ್'ಗೂ ಏನು ವ್ಯತ್ಯಾಸ?

ಈಕೆ ಮಾನವಂತೆ; ಅದು ವಿದ್ಯುನ್ಮಾನವಂತೆ.

■ ರಾಮ್